ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಯಲಹಂಕ ಹೋಬಳಿ ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂ. 4 ಮತ್ತು 8ರಲ್ಲಿನ ನಿವೇಶನಗಳ ಬಗ್ಗೆ

ಶ್ರೀ ಕಾಂತರಾಜು(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) -

1045 (1279) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಯಲಹಂಕ ಬೆಂಗಳೂರು ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂಬರ್ 4 ಮತ್ತು 8ರಲ್ಲಿನ ನಿವೇಶನ ಸಂಖ್ಯೆ 1 ರಿಂದ 160ರ ವರೆಗಿನ ಎಷ್ಟು ನಿವೇಶನಗಳನ್ನು ಅಭಿವೃದ್ಧಿಗಾರರು ಯಾವ ಸಂಘದ ಪರವಾಗಿ ನೋಂದಣಿ ಮಾಡಿಕೊಟ್ಟಿರುತ್ತಾರೆ; (ನಿವೇಶನಗಳ ಸಂಖ್ಯೆ, ಕ್ರಯದಾರರ ಹೆಸರು ಮತ್ತು ವಿಳಾಸ, ನೋಂದಣಿ ದಿನಾಂಕ ಸಮೇತ ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ಬಡಾವಣೆ ಹಾಗೂ ಅದರ ಪಕ್ಕದ ಅಗ್ರಹಾರ ಗ್ರಾಮದ ಸರ್ವೆ ನಂ. 5/1ಪಿ, 5/2. 12/2, 14/2 ಹಾಗೂ 3/4ಪಿ, 3/2ಪಿ ಮತ್ತು 16 ಹಾಗೂ ಇತರೆಗಳಲ್ಲಿ ಎಷ್ಟು ನಿವೇಶನಗಳನ್ನು ಸಂಘದ ಸದಸ್ಯರಿಗೆ ನೋಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಅಭಿವೃದ್ಧಿಗಾರರಿಂದ ನೇರವಾಗಿ ಎಷ್ಟು ನಿವೇಶನಗಳನ್ನು ಖಾಸಗಿದಾರರಿಗೆ ನೋಂದಣಿ ಮಾಡಿಕೊಟ್ಟಿರುತ್ತಾರೆ; (ವಿವರವಾದ ಮಾಹಿತಿ ನೀಡುವುದು)

(ಇ) ಯಲಹಂಕ ಹೋಬಳಿ ಗಸ್ತಿಕೆಂಪನಹಳ್ಳಿ ಗ್ರಾಮದ ಸರ್ವೆ ನಂಬರ್ 4 ಮತ್ತು 8ರಲ್ಲಿನ ನಿವೇಶನ ಸಂಖ್ಯೆ 210ನ್ನು 2010-11ನೇ ಸಾಲಿನಲ್ಲಿ ಯಾರು ಯಾರಿಂದ ಪಡೆದಿರುತ್ತಾರೆ; (ವಿವರವಾದ ಮಾಹಿತಿ ನೀಡುವುದು)

(ಈ) ಸದರಿ ನೋಂದಣಿದಾರರ ಹೆಸರಿನಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ನೋಂದಣಿಯಾಗಿರುವ ಜಮೀನುಗಳು ಹಾಗೂ ನಿವೇಶನಗಳಾವುವು? (ಸಂಪೂರ್ಣ ಮಾಹಿತಿ ನೀಡುವುದು)